ಪಾಠ–10 ಮಾರ್ಚ್ 2–8

# ದೇವರ ನಿತ್ಯವಾದ ಶುಭವಾರ್ತೆ



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : ಪ್ರಕ 14:6–12, ಮತ್ತಾ 24:14, ಪ್ರಸಂಗಿ 12:13,14, ವಿಮೋ 20:2–11, ಯೆಶಾಯ 21:9 ಮತ್ತು ಯೆಶಾಯ 34:8–10.

**ಸ್ಮರಣವಾಕ್ಯ : "ಇದರಲ್ಲಿ ದೇವರ ಆಜ್ಞೆಗಳನ್ನೂ ಯೇಸುವಿನ ನಂಬಿಕೆಯನ್ನೂ ಕೈಕೊಂಡು ನಡೆಯುತ್ತಿರುವ ದೇವಜನರ ತಾಳ್ಮೆಯು ತೋರಿ ಬರುತ್ತದೆ" – ಪ್ರಕಟನೆ 14:12.**

ಲೋಕವು ಮೃಗವನ್ನು ಪೂಜಿಸಿ ಅದರ ಗುರುತನ್ನು ಹೊಂದಿಕೊಳ್ಳುವ ಹಾಗೆ ಸೈತಾನನ ಅಂತ್ಯಕಾಲದ ವಂಚನೆಯು ಬಹಳ ಯಶಸ್ಸು ಗಳಿಸುವುದನ್ನು ಪ್ರಕಟನೆಯು ತಿಳಿಸುತ್ತದೆ. ಆದಾಗ್ಯೂ ಪ್ರಕ 14:1–5 ಲೋಕದ ಬಹುತೇಕ ಜನರು ದೇವರಿಗೆ ನಿಷ್ಠರಾಗದಿದ್ದಾಗ್ಯೂ 'ಉಳಿದವರ'ನ್ನು ದೇವರು ಹೊಂದಿರುತ್ತಾನೆ.

ಅಂತ್ಯಕಾಲದಲ್ಲಿ ಮನುಷ್ಯರು ಆರಾಧಿಸಬೇಕು ಮತ್ತು ಆರಾಧಿಸಬಾರದು (ಪ್ರತಿಯೊಬ್ಬನು ಏನಾದರೊಂದನ್ನು ಪೂಜಿಸುತ್ತಿರುತ್ತಾನೆ) ಎಂಬುದನ್ನಲ್ಲ ಯಾರನ್ನು ಆರಾಧಿಸಬೇಕೆಂಬುದನ್ನು ಆಯ್ಕೆ ಮಾಡಬೇಕು.

ಮೃಗವನ್ನು ಆರಾಧಿಸುವವರು ಹಣೆಯ ಮೇಲಾಗಲಿ ಬಲಗೈಯ ಮೇಲಾಗಲಿ ಗುರುತನ್ನು ಹೊಂದಿಕೊಳ್ಳುತ್ತಾರೆ. ಈ ಕೈ ಮತ್ತು ಹಣೆಯ ಮೇಲಿನ ಗುರುತು ಅವರು ಕೈಯಿಂದ ನಡೆಸುವ ಕೃತ್ಯಗಳನ್ನು ಮತ್ತು ಮನಸ್ಸಿನಲ್ಲಿರುವ ನಂಬಿಕೆಯನ್ನು ಸಂಕೇತಿಸುತ್ತದೆ.

ಆ ಸಂದರ್ಭದಲ್ಲಿಯೇ ಸರ್ವಲೋಕಗಳಲ್ಲಿ ಸಾಕ್ಷಿಗಾಗಿ ಸುವಾರ್ತೆಯು ಸಾರಲ್ಪಡುತ್ತದೆ. ಪಂಚಾಶತ್ತಮ ದಿನದಿಂದ ಇದುವರೆಗೆ ಆಗದಿರುವಂಥದ್ದು ಮತ್ತೆ ಈ ಸಂದರ್ಭದಲ್ಲಿ (ಅಂತ್ಯಕಾಲದಲ್ಲಿ) ನಡೆಯುತ್ತದೆ. ತನಗೆ ಬಂಡಾಯವೆದ್ದು ಮನುಷ್ಯಕುಲವು ದೇವರ ನ್ಯಾಯತೀರ್ಪು ಆಗುವ ಮುನ್ನ ಸಕಲ ಜನಾಂಗ, ಕುಲ, ಪ್ರಜೆಗಳಿಗೂ, ಸಕಲ ಭಾಷೆಗಳನ್ನಾಡುವವರಿಗೂ ತನ್ನ ಎಚ್ಚರಿಕೆ ಸಂದೇಶವನ್ನು ಕಳುಹಿಸುತ್ತಾನೆ (ಪ್ರಕ 14:6).

ದೇವರಿಗೆ ಒಬ್ಬರೂ ನಾಶವಾಗಬಾರದು, ಎಲ್ಲರೂ ರಕ್ಷಣೆ ಹೊಂದಬೇಕೆಂದು ದೇವರು ಬಯಸುತ್ತಾನೆ. ಅದಕ್ಕಾಗಿಯೇ ಯೇಸುಕ್ರಿಸ್ತನು ಎಲ್ಲರಿಗೋಸ್ಕರ ಸತ್ತನು. ಯಾರು ಆತನನ್ನು ಅಂಗೀಕರಿಸುತ್ತಾರೆ ಅಥವಾ ಅಂಗೀಕರಿಸುವುದಿಲ್ಲ ಎಂಬುದೇ ಈಗಿನ ಪ್ರಶ್ನೆಯಾಗಿದೆ.

ಈ ವಾರದ ಪಾಠವನ್ನು ಮಾರ್ಚ್ 9ರ ಸಬ್ಬತ್ತಿಗೆ ಸಿದ್ಧಪಡಿಸಿಕೊಳ್ಳಿರಿ.

**ಭಾನುವಾರ** **ಮಾರ್ಚ್ 3**

## ಮೂರು ದೂತರ ಸಂದೇಶಗಳು

ಅಂತ್ಯಕ್ಕೆ ಮೊದಲು ದೇವರು ತನ್ನ ಎಚ್ಚರಿಕೆಯನ್ನು ಕಳುಹಿಸುತ್ತಾನೆ. ಇದು ಸಾಂಕೇತಿಕವಾಗಿ ಆಕಾಶದಲ್ಲಿ ಹಾರುತ್ತಾ ಮಹಾಶಬ್ದದಿಂದ ಕೂಗಿ ಹೇಳುವ ದೂತರ ರೂಪದಲ್ಲಿ ಚಿತ್ರಿತವಾಗಿದೆ. ಗ್ರೀಕ್ ಭಾಷೆಯಲ್ಲಿ ದೂತನು ಎಂಬ ಪದಕ್ಕೆ 'ಸಂದೇಶಕನು' ಎಂಬ ಅರ್ಥವಿದೆ.

ಪ್ರಕಟನೆ ಪುಸ್ತಕದಲ್ಲಿ ಬರುವ ಮೂರುದೂತರು ಅಂತ್ಯಕಾಲದ ಸಂದೇಶವನ್ನು ಲೋಕಕ್ಕೆ ಸಾರುವ ಜವಾಬ್ದಾರಿಕೆ ಪಡೆದಿರುವ ದೇವಜನರನ್ನು ಸೂಚಿಸುತ್ತದೆ.

**ಓದಿರಿ : ಪ್ರಕಟನೆ 14:6ನ್ನು ಮತ್ತಾಯ 24:14 ರ ಜೊತೆಗೆ ಓದಿರಿ. ಮೊದಲ ದೂತನ ಸಂದೇಶ 'ನಿತ್ಯವಾದ ಶುಭವರ್ತಮಾನ'ವೆಂದು ಪರಿಗಣಿಸಲ್ಪಡುತ್ತದೆ. ನಿತ್ಯವಾದ ಶುಭವರ್ತಮಾನವಾಗಿ ಸಾರೋಣವಾಗುವ ಇದು ಏನನ್ನು ವಿವರಿಸುತ್ತದೆ?**

ಈ ಮೊದಲ ದೂತನ ಸಾರುವಿಕೆಯನ್ನು ನಿತ್ಯವಾದ ಶುಭವರ್ತಮಾನವೆಂದು ವರ್ಣಿಸಲಾಗಿದೆ. ಇದರ ವಿಷಯ ಮತ್ತು ಉದ್ದೇಶ ಏನಾಗಿದೆ? ನಮ್ಮ ನಂಬಿಕೆಗೆ ಇದು ಮುಖ್ಯವಾಗಿದೆ ಏಕೆ?

ಅಂತ್ಯಕಾಲದ ಮೊದಲ ಸಂದೇಶವು ಲೋಕದ ಮೇಲೆ ಬರಲಿರುವ ದೇವರ ನ್ಯಾಯತೀರ್ಪಿನ ಗಳಿಗೆಯ ಸಂದರ್ಭದಲ್ಲಿ ಸಾರುವಂಥ ಶುಭವರ್ತಮಾನವಾಗಿದೆ. ದೇವರು ನಂಬಿಕೆಯಿಟ್ಟ ಕಾರಣದಿಂದ ಮತ್ತು ಸುವಾರ್ತೆಯು ಯೇಸುಕ್ರಿಸ್ತನ ಕೆಲಸ ಮತ್ತು ನಂಬಿಕೆಯ ಆಧಾರದ ಮೇಲೆ ದೇವರು ಮನುಷ್ಯರನ್ನು ರಕ್ಷಿಸುವ ಒಳ್ಳೆಯ ಸುದ್ದಿಯಾಗಿದೆ. ಈ ಶುಭವರ್ತಮಾನವು ನಿತ್ಯವಾದುದಾಗಿದೆ.

ದೇವರು ಎಂದಿಗೂ ಬದಲಾಗುವುದಿಲ್ಲವಾದುದರಿಂದ ಈ ಶುಭವರ್ತಮಾನವು ನಿತ್ಯವಾದುದಾಗಿದೆ. ನಾವು ಸೃಷ್ಟಿಯಾಗುವುದಕ್ಕಿಂತ ಮೊದಲೇ ಈ ರಕ್ಷಣಾ ಯೋಜನೆಯು ಅಸ್ತಿತ್ವದಲ್ಲಿದೆ (2 ತಿಮೊ 1:9 ಮತ್ತು ತೀತ 1:2): ಮೊದಲ ಸಂದೇಶವು ರಕ್ಷಣೆ ಮತ್ತು ನ್ಯಾಯತೀರ್ಪು ಎರಡನ್ನೂ ಒಳಗೊಂಡಿದೆ. ಯಾರು ದೇವರನ್ನು ತಮ್ಮ ಸೃಷ್ಟಿಕರ್ತನೆಂದು ಆರಾಧಿಸಿ ಅವನಿಗೆ ಮಹಿಮೆ ಸಲ್ಲಿಸುತ್ತಾರೋ ಅವರಿಗೆ ಇದು ಶುಭವರ್ತಮಾನವಾಗಿದೆ. ಯಾರು ಸೃಷ್ಟಿಕರ್ತನನ್ನೂ ಆತನ ನಿಜವಾದ ಆರಾಧನೆಯ ಗುರುತು 7ನೇ ದಿನದ ಸಬ್ಬತ್ತನ್ನೂ ತಿರಸ್ಕರಿಸುತ್ತಾರೋ ಅವರಿಗೆ ನ್ಯಾಯತೀರ್ಪು ಆಗುತ್ತವೆಂದು ಎಚ್ಚರಿಕೆಯೂ ಆಗಿದೆ.

ಮೂರು ದೂತರ ಸಂದೇಶವನ್ನು "ಮಹಾಶಬ್ದ"ದಿಂದ ಸಾರಿದರೆಂಬುದಾಗಿ ವರ್ಣಿಸಲಾಗಿದೆ (ಪ್ರಕ 14:7,9) ಈ ಸಂದೇಶಗಳು ಮುಖ್ಯವಾದವುಗಳು ಮತ್ತು ತುರ್ತಾದವುಗಳಾಗಿದೆ. ಇವು ಎಲ್ಲರಿಗೂ ಕೇಳಿಸುವಂತಿರಬೇಕು. ಯಾಕೆಂದರೆ ಎಲ್ಲರ ಶಾಶ್ವತ ಭವಿಷ್ಯದ ಬಗ್ಗೆ ಚಿಂತಿಸುತ್ತದೆ. ಹಾಗಾಗಿ ಈ ಸಂದೇಶವು ಸರ್ವ ಜನಾಂಗಗಳಿಗೆ, ಕುಲ, ಪ್ರಜೆಗಳಿಗೆ, ಸಕಲ ಭಾಷೆಗಳನ್ನಾಡುವವರಿಗೆ

ಸಾರಬೇಕಾಗಿದೆ. ಕಡೆಯ ಕಾಲದಲ್ಲಿ ಮೃಗವು ಸರ್ವ ಜನಾಂಗಗಳ ಕುಲಗಳ, ಸಕಲ ಭಾಷೆಗಳನ್ನಾಡುವವರ ಮೇಲೆ ಅಧಿಕಾರವನ್ನು ಚಲಾಯಿಸುವವ–ನಾಗಿರುತ್ತಾನೆ. (ಪ್ರಕ 13:7). ಆದುದರಿಂದ ಇದರ ಸಾರುವಿಕೆ ವಿಶೇಷವಾದ ಮಹತ್ವವನ್ನು ಹೊಂದಿದೆ.

ಸೈತಾನನ ವಂಚನೆಯ ಚಟುವಟಿಕೆಗಳು ಲೋಕದಾದ್ಯಂತ ಪ್ರಭಾವ ಉಳ್ಳವುಗಳಾಗಿರುವುದರಿಂದ ಸುವಾರ್ತೆಯನ್ನು – ಪ್ರಪಂಚದಾದ್ಯಂತ ಸಾರಬೇಕಾಗಿದೆ.

ಸೈತಾನನ ಮತ್ತು ಅವನ ಅಂತ್ಯಕಾಲದ ಮೈತ್ರಿಕೂಟ– ಘಟಸರ್ಪ (ಅನ್ಯಧಾರ್ಮಿಕ ರೋಮ್), ಸಮುದ್ರದಿಂದ ಏರಿ ಬರುವ ಮೃಗ (ಕಥೋಲಿಕತ್ವ), ಭೂಮಿಯಿಂದ ಬರುವ ಮೃಗ (ಪ್ರೊಟೆಸ್ಟೆಂಟ್ ತತ್ವ) ಇವುಗಳಿಗೆ ಪ್ರತಿಯಾಗಿ ಮೂರುದೂತರ ಸಂದೇಶವು ದೇವಜನರಿಂದ ಸಾರಲ್ಪಡುತ್ತದೆ (ಪ್ರಕ 13ನೇ ಅಧ್ಯಾಯ). ಅವುಗಳು ತಮ್ಮ ಚಟುವಟಿಕೆಗಳನ್ನು 6ನೇ ಉಪದ್ರವದ ಕಾಲದವರೆಗೂ ನಡೆಸುವವು (ಪ್ರಕ 16:13,14). ಜನರ ನಿಷ್ಠೆಯನ್ನು ತಮ್ಮ ತಮ್ಮೆಡೆಗೆ ಗೆದ್ದುಕೊಳ್ಳುವ ಉದ್ದೇಶದಿಂದ ಲೋಕಕ್ಕೆ ಪರಸ್ಪರ ವೈರುಧ್ಯದ ಎರಡು ಸಂದೇಶಗಳು ಸಾದರಗೊಳ್ಳುತ್ತವೆ.

**ಅಡ್ವೆಂಟಿಸ್ಟರಾದ ನಾವು ಅಂತ್ಯಕಾಲದ ಸತ್ಯವಾಗಿರುವ ಮೂರು ದೂತರ ಸಂದೇಶಗಳು ಲೋಕದ ಜನರಿಗೆ ತಲುಪಿಸುವುದಕ್ಕಾಗಿ ಕರೆಯಲ್ಪಟ್ಟಿದ್ದೇವೆ. ಅದಕ್ಕೆ ನ್ಯಾಯ ಒದಗಿಸಲು ನಾವು ಏನು ಮಾಡುತ್ತಿದ್ದೇವೆ? ಇನ್ನೂ ಹೆಚ್ಚಿನದನ್ನು ನಾವು ಏನು ಮಾಡಬಹುದು?**

**ಸೋಮವಾರ** **ಮಾರ್ಚ್ 4**

## ಮೊದಲ ದೂತನ ಸಂದೇಶ : ಭಾಗ 1

ಓದಿರಿ : ಪ್ರಕ 14:7ನ್ನು ಪ್ರಸಂಗಿ 12:13,14 ರ ಜೊತೆಗೆ ಓದಿರಿ.

**"ದೇವರಿಗೆ ಭಯಪಡುವುದು" ಎಂಬುದು ಏನು ಅರ್ಥಕೊಡುತ್ತದೆ? ದೇವರಿಗೆ ಭಯಪಡಬೇಕೆಂಬ ಪರಿಕಲ್ಪನೆಯು ಸುವಾರ್ತೆಗೆ ಹೇಗೆ ಸಂಬಂಧಿಸಿದೆ? ದೇವರ**

**ಆಜ್ಞೆಗಳನ್ನು ಕೈಕೊಳ್ಳಬೇಕೆಂಬುದಕ್ಕೆ ಸುವಾರ್ತೆಯು ಏನು ಮಾಡುತ್ತದೆ? (ರೋಮ 7:7–13ನ್ನು ನೋಡಿರಿ) ದೇವರಿಗೆ ಭಯಪಡುವುದಕ್ಕೂ ದೇವರನ್ನು ಘನಪಡಿಸುವುದಕ್ಕೂ ಯಾವ ಸಂಬಂಧವಿದೆ?**

ದೇವರಿಗೆ ಭಯಪಟ್ಟು ಆತನನ್ನು ಘನಪಡಿಸಿರಿ ಎಂಬ ಕರೆಯು ನಿತ್ಯವಾದ ಶುಭವರ್ತಮಾನವು ಸಾರುವ ಸಂದರ್ಭದಲ್ಲಿ ಸಾರಲ್ಪಡುತ್ತದೆ. ನಮ್ಮ ರಕ್ಷಣೆಯ ಸಲುವಾಗಿ ಕ್ರಿಸ್ತನು ಮಾಡಿರುವುದನ್ನು ಅರಿತುಕೊಂಡು ಅದಕ್ಕೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸುವಂಥದ್ದಾಗಿದೆ.

ಸತ್ಯವೇದದಲ್ಲಿ ದೇವರಿಗೆ ಭಯಪಡುವುದಕ್ಕೂ ಮತ್ತು ಆತನನ್ನು ಘನಪಡಿಸುವುದಕ್ಕೂ ಹತ್ತಿರದ ಸಂಬಂಧವಿದೆ (ಕೀತ 22:23, ಪ್ರಕ 15:14) ಇವೆರಡೂ ಒಟ್ಟುಗೂಡಿ ಒಂದು ಸುಸಂಬಂಧವನ್ನೂ (ಯೋಬ 1:8) ವಿಧೇಯತೆಯನ್ನೂ... ದೇವರಿಗೆ ಭಯಪಡು ಎಂದರೆ ಆತನಿಗೆ ಹೆದರಿಕೊಳ್ಳಬೇಕೆಂಬ ಅರ್ಥವಲ್ಲ. ಆದರೆ ಆತನನ್ನು ನಾವು ಗಂಭೀರವಾಗಿ ಪರಿಗಣಿಸಿ ನಮ್ಮ ಜೀವಿತಗಳಲ್ಲಿ ಆತನ ಇರುವಿಕೆಯನ್ನು ಅನುಮತಿಸುವುದೇ ಆಗಿದೆ. ಅಂತ್ಯಕಾಲದ ದೇವಜನರು ದೇವರಿಗೆ ಭಯಪಡುವವರಾಗಿದ್ದಾರೆ (ಪ್ರಕ 11:18, ಪ್ರಕ 19:5) ತನ್ನ ಜನರು ತನ್ನನ್ನು ಪ್ರೀತಿಸಬೇಕೆಂತಲೂ (ಧರ್ಮ 11:13 ಮತ್ತು ಮತ್ತಾಯ 22:37) ವಿಧೇಯರಾಗಿರಬೇಕೆಂತಲೂ (ಧರ್ಮ 5:29, ಪ್ರಸಂಗಿ 12:13) ಮತ್ತು ತನ್ನ ಗುಣಸ್ವಭಾವಗಳನ್ನು ಪ್ರತಿಫಲಿಸಬೇಕೆಂತಲೂ (ಆ.ಕಾಂ 22:12) ಇಷ್ಟಪಡುತ್ತಾನೆ.

ನ್ಯಾಯತೀರ್ಪಿಗಳಿಗೆಯು ಬಂದಿರುವುದರಿಂದ ಆತನನ್ನು ಘನಪಡಿಸುವುದು ದೇವಜನರಿಗೆ ಬಹಳ ಮುಖ್ಯವಾಗಿದೆ (ಪ್ರಕ 14:7). ಇಲ್ಲಿ ನೋಡುವ ವಿಚಾರಣೆ ಸಹಿತವಾದ ನ್ಯಾಯತೀರ್ಪು ಯೇಸುವಿನ ಆಗಮನದ ಮುಂಚೆಯೇ ಮುಕ್ತಾಯವಾಗುತ್ತದೆ. ದೇವರನ್ನು ನಿಜವಾಗಿ ಸೇವಿಸುತ್ತೇವೋ ಅಥವಾ ಸೇವಿಸುವುದಿಲ್ಲವೋ ಎಂಬುದು ನಾವು ಮಾಡುವ ಆಯ್ಕೆ (ನಮ್ಮ ಕೃತ್ಯಗಳಿಂದ ಪ್ರಕಟಿತವಾಗುತ್ತದೆ) ಎಂತಹದು ಎಂಬುದನ್ನು ತೋರಿಸುವ ಉದ್ದೇಶದಿಂದ ಈ ನ್ಯಾಯವಿಚಾರಣೆಯು ನಡೆಯುತ್ತದೆ.

ನಾವು ದೇವರನ್ನು ನಿಜವಾಗಿಯೂ ಸೇವಿಸುತ್ತೇವೆಯೋ ಅಥವಾ ಇಲ್ಲವೋ ಎಂಬುದನ್ನು ಪ್ರಕಟಪಡಿಸುವ ಉದ್ದೇಶದಿಂದ ಈ ನ್ಯಾಯವಿಚಾರಣೆಯು ನಡೆಯುತ್ತದೆ. ನಾವು ಯಾವುದನ್ನು ಆಯ್ಕೆ ಮಾಡಿದ್ದೇವೆ ಎಂಬುದು ನಮ್ಮ ಕೃತ್ಯಗಳಿಂದ ತೋರಿ ಬರುತ್ತದೆ (2 ಕೊರಿಂಥ 5:10). ಈ ನ್ಯಾಯವಿಚಾರಣೆಯ ಮುಕ್ತಾಯದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಗತಿಯು ನಿರ್ಧರಿಸಲ್ಪಡುತ್ತದೆ. ಯೇಸುಕ್ರಿಸ್ತನು ಮನುಷ್ಯನಿಗೆ ಅವರವರ ನಡತೆಯ ಪ್ರಕಾರ ಪ್ರತಿಫಲ ಕೊಡುವುದಕ್ಕಾಗಿ ತಿರುಗಿ ಬರುತ್ತಿದ್ದಾನೆ (ಪ್ರಕ 22:12). ಪ್ರಕಟನೆ 14ನೇ ಅಧ್ಯಾಯದಲ್ಲಿ ಕೊಟ್ಟಿರುವ ನ್ಯಾಯತೀರ್ಪು ಸುವಾರ್ತೆಯ ಒಂದು ಭಾಗವಾಗಿದೆ, ಯಾರಿಗೆ ದೇವರೊಂದಿಗೆ ಒಳ್ಳೆಯ ಸಂಬಂಧವಿದೆಯೋ ಅವರಿಗೆ 'ನ್ಯಾಯತೀರ್ಪು' ಒಳ್ಳೆಯ ಸುದ್ದಿ (ಶುಭವರ್ತಮಾನ)ಯಾಗಿದೆ. ಅಂದರೆ ದೋಷಪರಿಹಾರ, ರಕ್ಷಣೆ, ಸ್ವಾತಂತ್ರ್ಯ, ನಿತ್ಯಜೀವ ಆದಾಗ್ಯೂ ಅವಿಧೇಯರಿಗೆ ಇದು ಕೆಟ್ಟವಾರ್ತೆಯಾಗಿದೆ. ಈ ಅಂತ್ಯಕಾಲದ ಸಂದೇಶವನ್ನು ಸ್ವೀಕರಿಸಿ ತಮ್ಮ ಪಾಪಗಳಿಗೆ ಪಶ್ಚಾತ್ತಾಪಪಟ್ಟು ದೇವರ ಕಡೆಗೆ ತಿರುಗಿಕೊಳ್ಳದೆ ಹೋಗುವವರಿಗೆ ಇದು ಕೆಟ್ಟವಾರ್ತೆಯಾಗಿ, ದೇವರಿಗೆ ಯಾರೂ ನಾಶಹೊಂದಬಾರದು ಎಲ್ಲರೂ ಪಶ್ಚಾತ್ತಾಪ ಪಡಬೇಕೆಂಬುದು ಅವನ ಬಯಕೆಯಾಗಿದೆ (2 ಪೇತ್ರ 3:9).

**ನ್ಯಾಯವಿಚಾರಣೆಯಲ್ಲಿ ನೀನೊಬ್ಬನೇ ಹೇಗೆ ನಿಲ್ಲುವೆ? ಯಾವ ತೀರ್ಪು ನಿನ್ನ ಜೀವಿತಕ್ಕೆ ಪ್ರಕಟಿಸಲ್ಪಡುತ್ತದೆ? ಸುವಾರ್ತೆಯ ಅಗತ್ಯದ ಬಗ್ಗೆ ನಿನ್ನ ಉತ್ತರ ಏನು ಹೇಳುತ್ತದೆ? ಇದು ಮೊದಲ ದೂತನ ಸಂದೇಶದಲ್ಲಿ ನ್ಯಾಯತೀರ್ಪಿನೊಂದಿಗೆ ಹೇಗೆ ಬೆಸೆದುಕೊಂಡಿದೆ?**

**ಮಂಗಳವಾರ** **ಮಾರ್ಚ್ 5**

## ಮೊದಲ ದೂತನ ಸಂದೇಶ – ಭಾಗ 3

ಲೋಕದ ಚರಿತ್ರೆಯ ಅಂತಿಮ ಬಿಕ್ಕಟ್ಟಿನ ಪ್ರಮುಖ ವಿವಾದಾಂಶ (ರಾದ್ಧಾಂತಗಳು) ದೇವರನ್ನು ಆರಾಧಿಸುವುದು ಮತ್ತು ಆಜ್ಞೆಗಳನ್ನು ಕೈಗೊಡು ಆತನಿಗೆ ವಿಧೇಯರಾಗುವುದು ಎಂಬುದನ್ನು ಪ್ರಕಟನೆಯು ತೋರಿಸುತ್ತದೆ (ಪ್ರಕ 14:12) ಲೋಕದ ಜನರು ಎರಡು ಗುಂಪುಗಳಾಗಿ ವಿಂಗಡಿಸಲ್ಪಡುತ್ತಾರೆ.

ಒಂದನೆಯದು ದೇವರಿಗೆ ಭಯಪಟ್ಟು ಆತನನ್ನು ಆರಾಧಿಸುವ ಗುಂಪು, ಎರಡನೆಯದು ಮೃಗಕ್ಕೆ ಭಯಪಟ್ಟು ಆತನನ್ನು ಆರಾಧಿಸುವ ಗುಂಪು.

**ಆಲೋಚಿಸಿರಿ ಅವಲೋಕಿಸಿರಿ : ದಶಾಜ್ಞೆಗಳಲ್ಲಿ ಮೊದಲ ನಾಲ್ಕು ಆಜ್ಞೆಗಳು (ವಿಮೋ 20:2–11) ಪರಿಶೀಲಿಸಿರಿ. ನಂತರ ಪ್ರಕಟನೆ 13ನೇ ಅಧ್ಯಾಯವನ್ನು ಓದಿರಿ, ಮೃಗವು ಹೇಗೆ ತನ್ನನ್ನು ಆರಾಧಿಸಬೇಕೆಂದು ಒತ್ತಾಯಪಡಿಸುತ್ತದೆ (ಪ್ರಕ 13:15) ಮೃಗಕ್ಕಾಗಿ ವಿಗ್ರಹವನ್ನು ಮಾಡಿಕೊಳ್ಳಬೇಕೆಂದು ಅವರಿಗೆ ಹೇಳುತ್ತದೆ (ಪ್ರಕ 13:14,15). ದೇವದೂಷಣೆ ಹೆಸರುಗಳು (ಪ್ರಕ 13:5,6), ಮೃಗದ ಗುರುತನ್ನು ಹಾಕಿಸಿಕೊಂಡವರು (ಪ್ರಕ 13:16,17) ಇವೆಲ್ಲವೂ ಹತ್ತು ಆಜ್ಞೆಗಳಲ್ಲಿ ಮೊದಲ 4 ಆಜ್ಞೆಗಳ ಮೇಲೆ ಸೈತಾನನ ಆಕ್ರಮಣಗಳನ್ನು ತೋರಿಸುತ್ತದೆ.**

ಹತ್ತು ಆಜ್ಞೆಗಳ ಮೊದಲ ನಾಲ್ಕು ಆಜ್ಞೆಗಳ ಮುಖ್ಯ ಪರಿಕಲ್ಪನೆಯು "ಆರಾಧನೆ" ಯಾಗಿದೆ. ಅಂತಿಮ ಬಿಕ್ಕಟ್ಟಿನಲ್ಲಿ ಆಜ್ಞೆಗಳು ದೇವರಿಗೆ ತೋರಿಸುವ ನಿಷ್ಠೆಗೆ ಪ್ರಮಾಣಗಳಾಗಿವೆ. ಕ್ರಿಸ್ತನ ಮತ್ತು ಸೈತಾನನ ನಡುವೆ ಇರುವ ಅಂತಿಮ ಸಂಘರ್ಷ ಆರಾಧನೆ ಮತ್ತು ಮೊದಲ ನಾಲ್ಕು ಆಜ್ಞೆಗಳ ಸುತ್ತ ಸುತ್ತುವುದಾಗಿದೆ. ಮೊದಲನೇ ದೂತನ ಸಂದೇಶದಲ್ಲಿ ಇರುವ ಎರಡನೆಯ ಎಚ್ಚರಿಕೆಯನ್ನು ಅಂತಿಮ ಕಾಲದ ಬಿಕ್ಕಟ್ಟಿನ ಮುಖ್ಯವಾದ ವಿಷಯವೆಂದು ಒತ್ತಿ ಹೇಳಬಹುದು.

ಭೂಮ್ಯಾಕಾಶಗಳನ್ನು, ಸಮುದ್ರವನ್ನು, ನೀರಿನ ಬುಗ್ಗೆಗಳನ್ನು ಉಂಟು ಮಾಡಿದಾತನಿಗೆ ಭಯಪಟ್ಟು ಆತನನ್ನು ಘನಪಡಿಸಿರಿ (ಪ್ರಕ 14:7) ಎಂಬ ಕರೆಯು ದಶಾಜ್ಞೆಗಳ ನಾಲ್ಕನೇ ಆಜ್ಞೆಯ (ವಿಮೋ 20:11) ನಿಖರವಾದ ಅವತರಣವಾಗಿದೆ. ಸೃಷ್ಟಿಕರ್ತನಾದ ದೇವರನ್ನು ಆರಾಧಿಸಿರಿ ಎಂಬ ಕರೆಯು ಸಬ್ಬತ್ತಿನ ಆಚರಣೆಗೆ ನೀಡಿರುವ ಕರೆಯಾಗಿದೆ ಎಂಬುದನ್ನು ತೋರಿಸುತ್ತದೆ.

ಏಳನೇ ದಿನ– ಶನಿವಾರ ವಿಶ್ರಮಿಸಿಕೊಂಡು ಆರಾಧನೆ ಮಾಡುವುದು ದೇವರೊಂದಿಗೆ ನಮಗಿರುವ ಸಂಬಂಧಕ್ಕೆ ವಿಶೇಷ ಗುರುತಾಗಿದೆ (ವಿ. ಕಾಂಡ 31:13, ಯೆಹೆಜ್ಕೇಲ 20:12). ಮೊದಲನೆಯ ದೂತನ ಸಂದೇಶವು ಸೃಷ್ಟಿಕರ್ತನನ್ನು ಆರಾಧಿಸುವುದಕ್ಕೆ ನೀಡಿರುವ ಕರೆಯಾಗಿದೆ. 'ನಾಲ್ಕನೆಯ ಆಜ್ಞೆಗೆ ವಿರೋಧವಾಗಿ ಮಿಥ್ಯವಾದ ಸಬ್ಬತ್ತನ್ನು ಆಚರಿಸುವುದು ರಾಜ್ಯಾಧಿಕಾರವನ್ನು ಅನುಸರಣೆ

ಮಾಡುವುದು, ದೇವರಿಗೆ ವಿರೋಧವಾದ ಅಧಿಕಾರಕ್ಕೆ ಸ್ಪಷ್ಟವಾದ ನಿಷ್ಠೆಯನ್ನು ತೋರಿಸುವಂಥದ್ದು. ದೇವರಿಗೆ ವಿಧೇಯರಾಗಿ ನಿಕಟವಾದ ಸಬ್ಬತ್ತನ್ನು ಆಚರಿಸುವುದು ಸೃಷ್ಟಿಸಿದಾತನಿಗೆ ನಿಷ್ಠೆಯನ್ನು ತೋರಿಸುವಂಥದ್ದಾಗಿದೆ. ಒಂದು ವರ್ಗದ ಜನರು ಇಹಲೋಕದ ಅಧಿಕಾರಕ್ಕೆ ಮಣಿದು ಅದರ ಲಾಂಛನ ಅಂಗೀಕರಿಸಿಕೊಂಡು ಮೃಗದ ಗುರುತನ್ನು ಹಾಕಿಸಿಕೊಳ್ಳುವವರು. ಇದಕ್ಕೆ ವ್ಯತಿರಿಕ್ತವಾಗಿ ಮತ್ತೊಂದು ಗುಂಪು ದೈವಾಧಿಕಾರದ ನಿಷ್ಠೆಗೆ ಕುರುಹಾಗಿ ದೇವರ ಮುದ್ರೆಯನ್ನು ಹೊಂದಿಕೊಳ್ಳುತ್ತಾರೆ – ಎಲೆನ್ ಜಿ ವೈಟ್, ಮಹಾಹೋರಾಟ, ಪುಟ 605.

**ಸೃಷ್ಟಿ ಮತ್ತು ರಕ್ಷಣೆಯ ಬಗ್ಗೆ ನಮಗಿರುವ ಅಭಿಪ್ರಾಯವು ಹೇಗೆ ಸಂಬಂಧಪಟ್ಟಿವೆ? ಸಬ್ಬತ್ತಿನಲ್ಲಿ ವಿಶ್ರಾಂತಿ ಹೊಂದುವುದು ಬಹಳ ಮುಖ್ಯವೆಂದು ದೇವರು ಮಾಡಿದ್ದಾನೆ ಯಾಕೆ?**

**ಬುಧವಾರ** **ಮಾರ್ಚ್ 6**

## ಎರಡನೆಯ ದೂತನ ಸಂದೇಶ

ಎರಡನೆಯ ದೂತನ ಸಂದೇಶವು (ಬಾಬೆಲ್‌ನ ಮಿಥ್ಯ ಧಾರ್ಮಿಕ ಕ್ರಮ ವ್ಯವಸ್ಥೆ ಕುರಿತು ಅದರ) ಭ್ರಷ್ಟತೆಯನ್ನು, ಪತನವನ್ನು ಸಾರುತ್ತದೆ ಮತ್ತು ಇದನ್ನು ಮಿಥ್ಯ ಧಾರ್ಮಿಕ ವ್ಯವಸ್ಥೆಯೆಂದು ಗುರುತಿಸುತ್ತದೆ. ಪ್ರಕ 17:5 ರಲ್ಲಿ ಬಾಬೆಲನ್ನು 'ಜಾರಸ್ತ್ರೀಯರ ತಾಯಿ' ಎಂಬುದಾಗಿ ಕರೆಯಲಾಗಿದೆ. ಲೋಕದೊಂದಿಗೆ ಅನೈತಿಕ ಸಂಬಂಧವನ್ನು ಹೊಂದಿಕೊಳ್ಳುವ ಸಲುವಾಗಿ ಸತ್ಯವನ್ನು ತ್ಯಜಿಸಿ ದೇವರಿಂದ ಅನುಮೋದನೆಯನ್ನು ಪಡೆಯುವ ಈಕೆಯನ್ನು ಅನುಸರಿಸುವ ಇತರೆ ಸಭೆಗಳನ್ನು ಈಕೆಯ ಪುತ್ರಿಯರೆಂದು ಸಾಂಕೇತಿಕವಾಗಿ ಹೇಳಲಾಗಿದೆ.

ಎಲೆನ್ ಜಿ ವೈಟ್, ಮಹಾಹೋರಾಟ, ಪುಟ 382, 383.

**ಓದಿರಿ : ಪ್ರಕ 14:8ನ್ನು ಪ್ರಕ 18:2 ಮತ್ತು ಯೆಶಾಯ 21:9 ಜೊತೆಯಾಗಿ ಓದಿರಿ.**

ಬಿದ್ದಳು, ಬಿದ್ದಳು ಎಂಬುದಾಗಿ ಎರಡು ಸಲ ಹೇಳಿರುವುದು ಆಕೆಯ

ಭ್ರಷ್ಟತೆಯು ಮುಂದುವರೆದು ಪೂರ್ಣವಾಗಿ ನೈತಿಕವಾಗಿ ಬಿದ್ದು ಹೋಗುವುದನ್ನು ಸೂಚಿಸುತ್ತದೆ. ಬಾಬೆಲು ಈಗಾಗಲೇ ಬಿದ್ದುಹೋಗಿದೆ ಎಂದು ಬಣ್ಣಿಸಲಾಗಿದೆ. ಆದರೆ ಮುಂದೆ (ಭವಿಷ್ಯದಲ್ಲಿ) ಬೀಳುತ್ತದೆ ಎಂತಲೂ ಬಣ್ಣಿಸಲಾಗಿದೆ. ಯಾಕೆ?

ಪ್ರಕಟನೆಯಲ್ಲಿರುವ ಅಂತ್ಯಕಾಲದ ಬಾಬೆಲು ಅಂದರೆ ರೋಮನ್ ಕಥೋರಿಕತೆ ಮತ್ತು ಭ್ರಷ್ಟ ಪ್ರೊಟೆಸ್ಟೆಂಟತ್ವ ಎರಡೂ ಒಂದಾಗಿರುವ ಮಿಥ್ಯವಾದ ಧಾರ್ಮಿಕತೆಯಾಗಿದೆ. ಇವೆರಡೂ ದೇವರಿಗೆ ವಿರೋಧವಾಗಿ ದೇವಜನರಿಗೆ ವಿರೋಧವಾಗಿ ಸೈತಾನನ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ (ನೋಡಿರಿ ಪ್ರಕ 13:11–18, ಪ್ರಕ 16:13, ಪ್ರಕ 17:5). ಈ ಭ್ರಷ್ಟ ಒಕ್ಕೂಟವು ತನ್ನನ್ನು ದೇವರಿಗಿಂತಲೂ ಹೆಚ್ಚಿಸಿಕೊಂಡು ಲೋಕದಲ್ಲಿ ಸ್ಥಾನವನ್ನು ಪಡೆದುಕೊಳ್ಳುವ ಪುರಾತನ ಬಾಬೇಲಿನ ಅಹಂಕಾರವನ್ನು ತೋರಿಸುತ್ತದೆ.

ಈ ದುಷ್ಟ ವ್ಯವಸ್ಥೆಯು ಅಂತ್ಯಕಾಲದ ಸುವಾರ್ತ ಸಂದೇಶದಲ್ಲಿರುವ ಬೆಳಕನ್ನು ತಿರಸ್ಕರಿಸಿ ಸತ್ಯದಿಂದ ತನ್ನನ್ನು ಇನ್ನೂ ದೂರ ಮಾಡಿಕೊಳ್ಳುವ ಕುರಿತು ಎರಡನೇ ದೂತನ ಸಂದೇಶವು ದೇವಜನರನ್ನು ಎಚ್ಚರಿಸುತ್ತದೆ. ಲೋಕದೊಂದಿಗೆ ಈ ಸಭೆಯ ಒಂದಾಗುವಿಕೆಯು ಕ್ರೈಸ್ತರಾದ್ಯಂತ ನೆರವೇರಿದಾಗ 'ಬಾಬೇಲಿನ ಬೀಳುವಿಕೆ' ಯುಪೂರ್ಣವಾಗುತ್ತದೆ. ಎಲೆನ್ ಜಿ ವೈಟ್, ಮಹಾಹೋರಾಟ ಪುಟ 390. ಪ್ರಕ 14:8ನ್ನು ಪ್ರಕ 17:2 ಮತ್ತು ಪ್ರಕ 18:3 ರೊಟ್ಟಿಗೆ ಓದಿರಿ.

**ಬಾಬೆಲು ತನ್ನ ಅತಿ ಜಾರತ್ವವೆಂಬ ದ್ರಾಕ್ಷಾರಸವನ್ನು ಲೋಕಕ್ಕೆ ಹೇಗೆ ಕುಡಿಸುತ್ತದೆ? ದ್ರಾಕ್ಷಾರಸವು ಏನನ್ನು ಸಂಕೇತಿಸುತ್ತದೆ?**

17ನೇ ಅಧ್ಯಾಯದಲ್ಲಿರುವ ಪ್ರಕಟನೆಯು ಅಂತ್ಯಕಾಲದ ಬಾಬೆಲನ್ನೂ ಭೂಮಿಯು ಸಕಲ ಜನರಿಗೆ ತನ್ನ ಅನೀತಿಯೆಂಬ ದ್ರಾಕ್ಷಾರಸವನ್ನು ಕುಡಿಸುವ ಜಾರಸ್ತ್ರೀಯನ್ನಾಗಿ ಚಿತ್ರಿಸುತ್ತದೆ (ಪ್ರಕ 17:2ನ್ನು ನೋಡಿರಿ).

ಈ ಭ್ರಷ್ಟ ಧಾರ್ಮಿಕ ವ್ಯವಸ್ಥೆಯು ಕೂಡ ಮಾಡುತ್ತಿರುವ ಸುಳ್ಳು ಬೋಧನೆಗಳು ಮತ್ತು ಸುಳ್ಳು ಸುವಾರ್ತೆ ಬಾಬೆಲಿನ ದ್ರಾಕ್ಷಾರಸಕ್ಕೆ ನಿರ್ದೇಶಿತವಾಗಿದೆ.

ಇಂದು ಅನೇಕ ಪ್ರೊಟೆಸ್ಟೆಂಟ್ ಸಭೆಗಳು ಒಂದು ಕಾಲದಲ್ಲಿ ಕಥೋಲಿಕ

ಸಭೆಯರೊಂದಿಗಿದ್ದ ತಮ್ಮ ಭಿನ್ನತೆಗಳನ್ನು ತ್ವರಿತವಾಗಿ ಅಳಿಸಿಕೊಂಡು ಸತ್ಯಕ್ಕೆ ವಿಮುಖರಾಗಿ ಸತ್ಯವೇದ ಪ್ರವಾದನೆಯನ್ನು ನೆರವೇರಿಸುತ್ತಾ ಇವೆ. ತಮ್ಮನ್ನು ಕ್ರಿಸ್ತನ ದೇಹವಾಗಿ ಒಪ್ಪಿಕೊಂಡಿರುವ ಇವರ ಮಧ್ಯದಲ್ಲಿ ಬಾಬೆಲಿನ ದ್ರಾಕ್ಷಾರಸದ ಭ್ರಷ್ಟತೆಯ ಪ್ರಭಾವಕ್ಕೆ ನಾವು ಸಾಕ್ಷಿಗಳಾಗಿದ್ದೇವೆ. ಇದು ಸೃಷ್ಟಿಗೆ ಸಂಬಂಧಿಸಿದಂತೆ ಮೊದಲನೆಯ ದೇವದೂತನ ಸಂದೇಶಕ್ಕೆ ಸ್ಪಷ್ಟವಾದ ವಿರೋಧ ಮಾಡುತ್ತದೆ. 'ದೇವರ ವಾಕ್ಯವನ್ನು' ತಾತ್ವಿಕ ಸಂಪ್ರದಾಯಗಳು ಪಲ್ಲಟಗೊಳಿಸುತ್ತಿವೆ, ಪರಿಷ್ಕೃತ ದೇವವಾಕ್ಯವನ್ನು ಪಲ್ಲಟಗೊಳಿಸುವ ತಾತ್ವಿಕ ಸಂಪ್ರದಾಯಗಳು ಲಿಂಗ, ವಿವಾಹ ಇತ್ಯಾದಿ ವಿಷಯಗಳಲ್ಲಿ ಸತ್ಯವೇದದ ವ್ಯಾಖ್ಯಾನಗಳನ್ನು ತ್ಯಜಿಸಿ ಮದ್ಯಪಾನ ಮಾಡಿ ಮತ್ತರಾದ ಜನರು ಸರಿಯಾಗಿ ಆಲೋಚಿಸಲಾರರು. ಇವರು ಬಾಬೆಲಿನ ದ್ರಾಕ್ಷಾರಸವನ್ನು (ಮದ್ಯಪಾನ) ಕುಡಿದು ಆತ್ಮೀಕತೆಯಲ್ಲಿ ಅಮಲೇರಿದವ–ರಾಗಿರುವಾಗ ಬಾಬೆಲು ಸಮುದ್ರದಿಂದ ಬಂದ ಮೃಗವನ್ನು ಆರಾಧಿಸುವಂತೆ ಜನರನ್ನು ಮರುಳುಗೊಳಿಸುತ್ತದೆ. ಆವಾಗ ಜನರು ಮೃಗದ ಗುರುತನ್ನು ಹೊಂದಿಕೊಳ್ಳುತ್ತಾರೆ.

**ಗುರುವಾರ** **ಮಾರ್ಚ್ 7**

## ಮೂರನೆ ದೇವದೂತನ ಸಂದೇಶ

ಪ್ರಕಟನೆ 14:12 ದೇವರ ನಂಬಿಗಸ್ತ ಜನರನ್ನು ಹೇಗೆ ಚಿತ್ರಿಸುತ್ತದೆ? ದೇವರ ನಂಬಿಗಸ್ತ ಜನರಿಗೆ ವ್ಯತಿರಿಕ್ತವಾಗಿ ಪ್ರಕಟನೆಗಳು 14:9,10 ದೇವರ ರೌದ್ರವನ್ನು ಅನುಭವಿಸುವವರ ಗತಿ ಹೇಗಿರುತ್ತದೆ ಎಂಬ ಎಚ್ಚರಿಕೆಯನ್ನು ಕೊಡುತ್ತದೆ. ಹಳೆಯ ಒಡಂಬಡಿಕೆಯಲ್ಲಿ ದೇವರು ಪ್ರಕಟಿಸುವ ಕೋಪವನ್ನು ಸಾಂಕೇತಿಕವಾಗಿ ಮದ್ಯಪಾನದ ಪಾತ್ರೆಯೆಂದು ವರ್ಣಿಸಲಾಗಿದೆ (ಯೆರೆ 25:15,16).

ಮೃಗದ ಗುರುತನ್ನು ಹೊಂದಿದವರಿಗೆ ಆಗುವ ಕಟುವಾದ ನ್ಯಾಯತೀರ್ಪನ್ನು ದೇವರ ರೌದ್ರವೆಂಬ ಪಾತ್ರೆಯಲ್ಲಿ ಏನೂ ಬೆರಸದೆ ಹಾಕಿದ ದೇವರ ಕೋಪವೆಂಬ ದ್ರಾಕ್ಷಾರಸವೆಂದು ಹೇಳಲಾಗಿದೆ (ಪ್ರಕ 14:10). ಹಿಂದಿನ ಕಾಲದಲ್ಲಿ ಜನರು ಮದ್ಯಪಾನ ತೀಕ್ಷ್ಣತೆಯನ್ನು ಕಡಿಮೆ ಮಾಡಲು ನೀರನ್ನು ಬೆರೆಸಿಕೊಳ್ಳುತ್ತಿದ್ದರು. ನೀರನ್ನು ಬೆರೆಸಿ ಅದರ ಸಾಂದ್ರತೆಯನ್ನು ಕಡಿಮೆ ಮಾಡಿಕೊಳ್ಳುತ್ತಿದ್ದರು. ಆದರೆ

ಇಲ್ಲಿ ದೇವರ ರೌದ್ರವೆಂಬ ಪಾತ್ರೆಯಲ್ಲಿ ಏನೂ ಬೆರಸದ ದ್ರಾಕ್ಷಾರಸ ಪಾನವೆಂಬುದಾಗಿ ಹೇಳಲಾಗಿದೆ. ಏನನ್ನೂ ಬೆರೆಸಿಲ್ಲದ ದ್ರಾಕ್ಷಾರಸವು ದೇವರ ನಿಷ್ಕಾರುಣ್ಯವನ್ನು ಕಡುಕೋಪದ ಪೂರ್ಣ ಪ್ರಬಲತೆಯನ್ನೂ ಸೂಚಿಸುತ್ತದೆ.

**ಓದಿರಿ : ಪ್ರಕಟನೆ 14:10,11ನ್ನು ಪ್ರಕಟನೆ 20:10–15ನ್ನು ಜೊತೆ ಜೊತೆಯಾಗಿ ಓದಿದಾಗ ಯೆಶಾಯ 34:8–10 ಮತ್ತು ಯೂದ 7ನೇ ವಾಕ್ಯ.**

ಈ ಹೇಳಿಕೆಯು ಮೇಲೆ 'ಅವರ ಯಾತನೆಯ ಹೊಗೆಯು ಯುಗಯುಗಾಂತರಗಳವರೆಗೆ ಏರುತ್ತದೆ' ಎಂಬ ಹೇಳಿಕೆಯ ಮೇಲೆ ಹೇಗೆ ಬೆಳಕನ್ನು ಚೆಲ್ಲುತ್ತದೆ?

ಬೆಂಕಿಗಂಧಕಗಳಿಂದಲೂ ಉರಿಯುವ ಕೆರೆಯಲ್ಲೂ ಪಡುವ ಯಾತನೆಯು ಪೂರ್ಣ ನಾಶನವನ್ನು ಹೇಳುತ್ತದೆ. ಬೆಂಕಿ ಮತ್ತು ಗಂಧಕವು ನ್ಯಾಯತೀರ್ಪಿನ ಮಾಧ್ಯಮವಾಗಿದೆ (ಆದಿ 19:24, ಯೆಶಾಯ 34:8–10). ಮೇಲೇರುವ ನಾಶನದ ಹೊಗೆಯು ಸತ್ಯವೇದದಲ್ಲಿ ಚೆನ್ನಾಗಿ ತಿಳಿಸಿರುವಂಥದ್ದಾಗಿದೆ. ಯೆಶಾಯನು ಎದೋಮಿನ ನಾಶನವನ್ನು ಬೆಂಕಿಗಂಧಕಗಳಿಂದ ನಾಶವಾಗುತ್ತದೆ ಎಂದು ಪ್ರವಾದನೆ ನುಡಿದಿದ್ದಾನೆ. ಅದು ಉರಿಯುವ ..... ಅದು ಹಗಲಿರುಳೂ ಆರದು, ಅದರ ಹೊಗೆ ನಿರಂತರ ಏರುತ್ತಿರುವುದು (ಯೆಶಾಯ 34:10). ಯೂದನು ಸೋದೋಮ್ ಮತ್ತು ಗೋಮೋರದ ದುರ್ಗತಿಯನ್ನು ಅನುಭವಿಸುತ್ತಾರೆ ಎಂದು ವಿವರಿಸುತ್ತಾನೆ (ಯಾದ 7ನೇ ವಾಕ್ಯ). ಈ ವಾಕ್ಯವು ಅಗ್ನಿಯು ಅಂತ್ಯವಿಲ್ಲದೆ ಸದಾ ಉರಿಯುತ್ತಿರುತ್ತದೆ ಎಂದು ಅರ್ಥಮಾಡಿಕೊಳ್ಳಬಾರದು. ಯಾಕೆಂದರೆ ಇಂದಿನವರೆಗೂ ಉರಿಯುತ್ತಿರುವುದಿಲ್ಲ. ಇಲ್ಲಿ ಆಗಿರುವ ಪರಿಣಾಮಗಳು ಶಾಶ್ವತವಾಗಿರುತ್ತದೆ (ನಿರಂತರವಾದವುಗಳು) ಬೆಂಕಿಯು ಸದಾ ಉರಿಯುತ್ತಿರುವುದಿಲ್ಲ. ಪ್ರಕಟನೆಯಲ್ಲಿ ಹೇಳಿರುವ ನಿತ್ಯವಾದ ಬೆಂಕಿಯು ನಿತ್ಯನಾಶನಕ್ಕೆ ಸೂಚಿತವಾಗಿದೆ. ಸುಡುವುದಕ್ಕೆ ಇನ್ನೇನು ಉಳಿದಿಲ್ಲ ಎನ್ನುವವರೆಗೂ ಎಲ್ಲವೂ ಪೂರ್ಣವಾಗಿ ದಹಿಸಿ ಹೋಗುವವರೆಗೆ ಮಾತ್ರ ಬೆಂಕಿಯು ಉರಿಯುತ್ತಿರುತ್ತದೆ.

**ನರಕದ ಬೆಂಕಿಯು ಸದಾ ಉರಿಯುತ್ತಲೇ ಇರುವುದಿಲ್ಲ ಎಂಬ ಮಹಾಸತ್ಯ ನಮಗೆ ತಿಳಿಸಲ್ಪಟ್ಟಿರುವುದಕ್ಕೆ ಕೃತಜ್ಞರಾಗಿರೋಣ.**

ಮುಂದೆ ಏನಾಗುತ್ತದೆ ಎಂದು ಇತರರನ್ನು ಎಚ್ಚರಿಸಲು ನಮಗೆ ಕೊಡಲ್ಪಟ್ಟಿರುವ ಪವಿತ್ರಕಾರ್ಯದ ಬಗ್ಗೆ ದಂಡನೆಯ ತೀಕ್ಷ್ಣತೆ ಮತ್ತು ನಿತ್ಯತೆ ಏನನ್ನು ಹೇಳಬೇಕು? ತಿಳಿಸಬೇಕು?

**ಶುಕ್ರವಾರ** **ಮಾರ್ಚ್ 8**

**ಹೆಚ್ಚಿನ ಚಿಂತನೆಗಾಗಿ :** ಎಲೆನ್ ಜಿ ವೈಟ್‌ರವರ – ಮಹಾಹೋರಾಟ ಪುಸ್ತಕದಲ್ಲಿ "ದಿ ಫೈನಲ್ ವಾರ್ನಿಂಗ್" ಪುಟ 603–612 ಓದಿರಿ.

ಅಂತ್ಯಕಾಲದಲ್ಲಿ ಲೋಕಕ್ಕೆ ಅಂತ್ಯಕಾಲದ ಸುವಾರ್ತೆಯನ್ನು ಸಾರಬೇಕೆಂದು ದೇವಜನರಿಗೆ ವಹಿಸಲಾಗಿದೆ. ಈ ಕೆಲಸವು ನಮಗೆ ಅಸಾಧ್ಯವೆಂದು ಎದೆಗುಂದಿಸುವಂತೆ ತೋರುತ್ತದೆ. ಆದರೆ ನಮಗೆ ದೈವಬಲದ ವಾಗ್ದಾನವಿದೆ. ಸುವಾರ್ತೆ ಸಾರುವ ಮಹಾ ಕೆಲಸವು ಆರಂಭದಲ್ಲಿ ತೋರಿ ಬಂದದ್ದಕ್ಕಿಂತ ಕಡಿಮೆಯಾದ ದೈವಬಲದಲ್ಲಿ ಮುಕ್ತಾಯವಾಗಬಾರದು. ಸಂದೇಶವು ಪರಿಶುದ್ಧಾತ್ಮನ ಮನವರಿಕೆಯಿಂದ ನೆರವೇರುವ ಹಾಗೆ ವಾದವಿವಾದಗಳಿಂದ ಆಗುವುದಿಲ್ಲ. ವಾದವಿವಾದಗಳು ಸಾದರಪಟ್ಟಿವೆ. ಬೀಜವು ಬಿತ್ತಲ್ಪಟ್ಟಿದೆ. ಇದು ಈವಾಗ ಮೊಳಿಕೆಯೊಡೆದು ಫಲವನ್ನು ತರುತ್ತದೆ. ಎಲೆನ್ ಜಿ ವೈಟ್ 'ಮಹಾ ಹೋರಾಟ' ಪುಟ 611, 612.

ದೇವರ ಅಂತಿಮ ಸಂದೇಶವು ಸಾರಲ್ಪಟ್ಟು ಅದರ ಮುಕ್ತಾಯವು ಲೋಕದ ಜನರನ್ನು ಎರಡು ಗುಂಪುಗಳನ್ನು ಮಾಡುವ ಮಹಾ ವಿಂಗಡನೆಯಾಗಿದೆ. ದೇವರನ್ನು ಪ್ರೀತಿಸಿ ಆತನಿಗೆ ವಿಧೇಯರಾದವರ ಗುಂಪು ಮತ್ತು ಮೃಗವನ್ನು ಪ್ರೀತಿಸಿ ಅದಕ್ಕೆ ವಿಧೇಯರಾದವರ ಗುಂಪು. ಈ ವಿಂಗಡನೆಯು ಎರಡು ಸುಗ್ಗಿಗಳಾಗಿ ಚಿತ್ರಿಸಲ್ಪಟ್ಟಿದೆ. ಗೋದಿಯ ಕಾಳನ್ನು ಸಂಗ್ರಹಿಸಿ ಕಣಜಕ್ಕೆ ತುಂಬುವುದು ಪ್ರಕ (14:14–16) ಮತ್ತು ದ್ರಾಕ್ಷಿ ಫಲವನ್ನು ಅಲೆಗಳಲ್ಲಿ ಹಾಕಿ ತುಳಿಯುವುದು (ಪ್ರಕ 14:17–20). ಈ ಅಂತಿಮ ವಿಂಗಡನೆಯೇ ಪ್ರಕಟನೆ 17 ಮತ್ತು 18 ಅಧ್ಯಾಯಗಳ ವಿಷಯವಾಗಿದೆ.

## ಚರ್ಚಿಸಬೇಕಾದ ಪ್ರಶ್ನೆಗಳು

1. ಈ ಚಿಂತನೆಯ/ ಆಲೋಚನೆಯ ಮೇಲೆ ಬೆಳಕು ಚೆಲ್ಲಿರಿ. ಅಡ್ವೆಂಟಿಸ್ಟರನ್ನು ಹೊರತುಪಡಿಸಿ ಮತ್ಯಾರು ಮೂರು ದೂತರ ಸಂದೇಶವನ್ನು ಬೋಧಿಸುತ್ತಿದ್ದಾರೆ? ಇದು ನಮಗೆ ನಮ್ಮ ಕೆಲಸವು ಎಷ್ಟು ಮುಖ್ಯವಾದುದು ಮತ್ತು ಎಷ್ಟು ಗಂಭೀರವಾಗಿ ಪರಿಗಣಿಸಬೇಕೆಂದು ಹೇಳುತ್ತದೆ?

2. ನ್ಯಾಯ ವಿಚಾರಣೆ ಎಂಬ ಪರಿಕಲ್ಪನೆಯು ಅನೇಕ ಕ್ರೈಸ್ತರಿಗೆ ಬಹಳ ಅಪ್ರಿಯವಾದ ಪರಿಕಲ್ಪನೆಯಾಗಿದೆ ಏಕೆ?

   **ಕ್ರಿಸ್ತನಾಗಮನಕ್ಕಿಂತ ಮುಂಚೆಯೇ ನಡೆಯುವ ನ್ಯಾಯವಿಚಾರಣೆಯು ಇಂದಿನ ಕ್ರೈಸ್ತರಿಗೆ ಎಷ್ಟು ಪ್ರಸ್ತುತವಾಗಿದೆ?**

   **ಕ್ರಿಸ್ತನ ಆಗಮನ ಪೂರ್ವದ ನ್ಯಾಯವಿಚಾರಣೆಯ ನಿಜವಾದ ಅರ್ಥವನ್ನು ಚೆನ್ನಾಗಿ ಗ್ರಹಿಸಿಕೊಳ್ಳುವ ಹಾಗೆ ನಿಮ್ಮ ಸಹಜೀವಿಗಳಿಗೆ (ಜೊತೆಯವರಿಗೆ) ಹೇಗೆ ಸಹಾಯ ಮಾಡುವಿರಿ?**

   ಅಂತಿಮ ಘಟನೆಗಳ ಸಂದರ್ಭದಲ್ಲಿ 'ಸಬ್ಬತ್ತಿನ' ಪ್ರಶ್ನೆ ಬಗ್ಗೆ ಚಿಂತಿಸಿ (ಆಲೋಚಿಸಿರಿ) : ವಿವಾದವೇನೆಂದರೆ: ನಾವು ಯಾರನ್ನು ಆರಾಧಿಸಬೇಕು? ಭೂಮ್ಯಾಕಾಶಗಳನ್ನು ಉಂಟುಮಾಡಿದ ಸೃಷ್ಟಿಕರ್ತನಾದ ದೇವರನ್ನೋ (ಪ್ರಕ 14:7) ಅಥವಾ ಮೃಗದ ಶಕ್ತಿಯನ್ನೋ?

ಸತ್ಯವೇದವು ಏಳನೇ ದಿನದ ಸಬ್ಬತ್ತು ತುಂಬಾ ಹಳೆಯದು ಎಂಬುದಾಗಿ ತಿಳಿಸುತ್ತದೆ (ಆ.ಕಾಂಡ 2:2,3).

ಸಬ್ಬತ್ತು ಭೂಮ್ಯಾಕಾಶಗಳನ್ನು ಸೃಷ್ಟಿಸಿದ ದೇವರ ಸೃಷ್ಟಿತನಕ್ಕೆ ಬಹಳ ಮುಖ್ಯವಾದ ತಳಹದಿಯುಳ್ಳ ಗುರುತಾಗಿದೆ.

ದಶಾಜ್ಞೆಗಳಲ್ಲಿ ಒಂದು ಆಜ್ಞೆಯಾಗಿದ್ದು ಅಂತಿಮ ಬಿಕ್ಕಟ್ಟಿನಲ್ಲಿ ಮುಖ್ಯಪಾತ್ರವನ್ನು ವಹಿಸುವ ಸಬ್ಬತ್ತಿನ ಬಗ್ಗೆ ಸತ್ಯವು ನಮಗೆ ಏನನ್ನು ಬೋಧಿಸುತ್ತದೆ?